**ದಿನಾಂಕಃ 10-03-2022          ಓ ಎಸ್ ನಂ.88/2014 (ಡಿ .ಡಬ್ಲ್ಯೂ 2)**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಶ್ರೀ ಆರ್ ಬಿ ಪಿ ವಕೀಲರಿಂದ ವಾದಿಯರ ಪರಃ

ನನ್ನ ಸಾಕ್ಷಿ ಪ್ರಮಾಣ ಪತ್ರದ 13 ನೇ ಪ್ಯಾರಾದಲ್ಲಿ ವಿ ಪಿ ಸಿ ನಂಃ 182 ಆಸ್ತಿಯು 1 ನೇ ವಾದಿ ವಿಷ್ಣುವಿನ ಮಾಲ್ಕಿ ಕಬ್ಜಾ ಜಮೀನು ಅಂತಾ ಬರೆಸಿಲ್ಲಾ . ಸದರಿ ವಿ ಪಿ ಸಿ ನಂಃ 182 ಆಸ್ತಿಯನ್ನು ನನ್ನ ಅಜ್ಜ ಭರಮಾ ಮತ್ತು ಪರಶುರಾಮ ಇವರಿಗೆ 20 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾರೆ. ಸದರಿ ಜಮೀನು ಮಾರಾಟವಾದ ವಿಷಯ ವಾದಿಗೆ ಗೋತ್ತಿದ್ದರು ಸಹ ಆ ವಿಷಯ ದಾವೇಯಲ್ಲಿ ಉದ್ದೇಶಪೂರ್ವಕವಾಗಿ ಬರೆಸಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನನ್ನ ಸಾಕ್ಷಿಯ 13 ಮತ್ತು 14 ನೇ ಪ್ಯಾರಾದಲ್ಲಿ ಹೇಳಿದ್ದಂತೆ ವಾದಿ ಶಿವಾಜಿ ಲೋಹಾರ ಇತನಿಗೆ ಕೊಟ್ಟ ಕ್ರಯ ಮತ್ತು ನನ್ನ ಅಜ್ಜ ಭರಮಾ ಮತ್ತು ಪರಶುರಾಮ ಇತನಿಗೆ ಕೊಟ್ಟ ಕ್ರಯ ಒಟ್ಟು ಕುಟುಂಬದ ವತಿಯಿಂದ ಆಗಿವೆ ಅಂದರೆ ಸರಿಯಲ್ಲಾ. ಸದರಿ ಕಾಲಕ್ಕೆ ವಿ ಪಿ ಸಿ ನಂಃ 182 ವಾದಿ ಮತ್ತು ನನ್ನ ಅಜ್ಜನ ಹೆಸರಿನಲ್ಲಿ ಇದ್ದುದ್ದರಿಂದ ಒಟ್ಟು ಕುಟುಂಬದ ವತಿಯಿಂದ ಮಾರಾಟವಾಗಿದೆ ಅಂದರೆ ಸರಿಯಲ್ಲಾ.

ಸರ್ವೆ ನಂಃ 161 ಮತ್ತು 162 ಜಮೀನುಗಳನ್ನು ನನ್ನ ಅಜ್ಜ ದತ್ತಾತ್ರೆಯ 1965 ರಿಂದ ರೈತ ಅಂತಾ ಸಾಗು ಮಾಡುತ್ತಾ ಬಂದಿದ್ದರು. ಸದರಿ ಸರ್ವೆ ನಂಃ 161 ಮತ್ತು 162 ವಾದಿ ವಾದ ಪತ್ರದಲ್ಲಿ ಬರೆದಂತೆ ಪೊಟ ಹಿಸ್ಸಾ ಆಗಿವೆ ಅಂದರೆ ನಿಜ. ನನ್ನ ಅಜ್ಜ ಮೂಳಿ ಬಾಷೆಯಲ್ಲಿ ಸಹಿ ಮಾಡುತ್ತಿದ್ದರೂ. ನನ್ನ ಅಜ್ಜ ಪಾರ್ಮ ನಂಃ 7 ರೈತ ಅಂತಾ ತುಂಬಿದ್ದ ಅಂದರೆ ನಿಜ. ಸರ್ವೆ ನಂಃ 161 ಮತ್ತು 162 ಜಮೀನುಗಳನ್ನು 1965 ರ ಪೂರ್ವದಲ್ಲಿ ಯಾರ ಕಬ್ಜಾದಲ್ಲಿ ಇದ್ದವು ಅಂದರೆ ನನಗೆ ಗೋತ್ತಿಲ್ಲ. 1965 ರಿಂದ ನನ್ನ ಅಜ್ಜ ಸದರಿ ಜಮೀನುಗಳನ್ನು ರೈತ ನಾತೆಯಿಂದ ಸಾಗು ಮಾಡುತ್ತಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. 1965 8ಕ್ಕಂತ ಮೊದಲೇ ದತ್ತಾತ್ರೆಯನ ಹಿರಿಯರು ಮತ್ತು ಅವರ ಹಿರಿಯರು ರೈತ ನಾತೆಯಿಂದ ಸದರಿ ಸರ್ವೆ ನಂಃ 161 ಮತ್ತು 162 ಜಮೀನುಗಳನ್ನು ಸಾಗುವ ಮಾಡುತ್ತಿದ್ದರು ಅಂದರೆ ಸರಿಯಲ್ಲಾ. ನನ್ನ ಅಜ್ಜ ಪಾರ್ಮ ನಂಃ 7 ತುಂಬಿ ಕೊಡುವಾಗ ಸದರಿ ಜಮೀನುಗಳು ತಮ್ಮ ಹಿರಿ ಹಿರಿಯರ ಕಾಲದಿಂದ ಸಾಗು

ಮಾಡುತ್ತಾ ಬಂದಿದ್ದೆವೆ ಅಂತಾ ನಮೂದಿಸಿದೆವೆ ಅಂದರೆ ಸರಿಯಲ್ಲಾ. ನನ್ನ ಅಜ್ಜನ ಹಿರಿ ಹಿರಿಯರ ಕಾಲದಿಂದ ಬಂದ ಕುಟುಂಬಗಳೆ ನಮ್ಮ ಮತ್ತು ವಾದಿಯ ಕುಟುಂಬಗಳು ಅಂದರೆ ಸರಿಯಲ್ಲಾ. ಆ ಕಾಲದಿಂದ ನಮ್ಮ ಹಿರಿಯರು ವಾದಿಯರ ಹಿರಿಯರು ರೈತ ನಾತೆಯಿಂದ ಸಾಗು ಮಾಡುತ್ತಾ ಬಂದಿದ್ದೇವೆ ಅಂದರೆ ಸರಿಯಲ್ಲಾ. ನನ್ನ ಅಜ್ಜ ದತ್ತಾತ್ತೆಯ ಸುಸಿಕ್ಷಿತ ಹಾಗೂ ವ್ಯವಹಾರ ಜ್ಞಾನ ಇದ್ದುದ್ದರಿಂದ ಒಟ್ಟು ಕುಟುಂಬಂದ ವತಿಯಿಂದ ಆತನ ಹೆಸರಿನಿಂದ ಪಾರ್ಮ ನಂಃ 7 ತುಂಬಿದ್ದರು ಅಂದರೆ ಸರಿಯಲ್ಲಾ. ಆನಂತರ ನನ್ನ ಅಜ್ಜನ ಹೆಸರಿನಲ್ಲಿ ಸದರಿ ಜಮೀನುಗಳು ಒಟ್ಟು ಕುಟುಂಬದ ಪರವಾಗಿ ಮಂಜೂರುವಾಗಿವೆ ಅಂದರೆ ಸರಿಯಲ್ಲಾ. ಮಂಜೂರಾದಾಗಿನಿಂದ ನಮ್ಮ ಕುಟುಂಬದವರು ಮತ್ತು ವಾದಿಯರ ಕುಟುಂಬದವರು ಒಟ್ಟು ಕುಟುಂಬದ ವತಿಯಿಂದ ಸದರಿ ಆಸ್ತಿಗಳನ್ನು ಸಾಗು ಮಾಡುತ್ತಾ ಬಂದಿರುತ್ತೆವೆ ಅಂದರೆ ಸರಿಯಲ್ಲಾ. ನನ್ನ ಅಜ್ಜನ ಹೆಸರಿನಿಂದ ಒಟ್ಟು ಕುಟುಂಬದ ವತಿಯಿಂದ ಜಮೀನುಗಳು ಮಂಜುರಾಗಿದ್ದು ಪಾರ್ಮ ನಂಃ 10 ಮತ್ತು ಡೈರಿ ಆತನ ಹೆಸರಿಗೆ ಒಟ್ಟು ಕುಟುಂಬದ ವತಿಯಿಂದ ಮಂಜುರಾಗಿದ್ದವು ಅಂದರೆ ಸರಿಯಲ್ಲಾ. ಪಾರ್ಮ ನಂಃ 7 ನನ್ನ ಅಜ್ಜನ ಹೆಸರಿನಲ್ಲಿ ಮಾತ್ರ ತುಂಬಿದ್ದರಿಂದ ಆತನ ಹೆಸರಿಗೆ ಸದರಿ ಆಸ್ತಿಗಳು ಬಂದಿವೆ ಅಂದರೆ ಸರಿಯಲ್ಲಾ. ಸರ್ವೆ ನಂಃ 161 ಮತ್ತು 162 ಜಮೀನುಗಳನ್ನು ವಾದಿಯರು ಜಂಟಿಯಾಗಿ ಸಾಗುವ ಮಾಡುತ್ತಿದ್ದರು ಸಹ ಅವರಿಗೆ ಯಾವುದೇ ಹಕ್ಕು ಮತ್ತು ಸ್ವಾಧಿನ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನನ್ನ ಅಜ್ಜನ ಹೆಸರಿನಲ್ಲಿ ಮಾತ್ರ ಸದರಿ ಜಮೀನುಗಳು ಇದ್ದುದ್ದರಿಂದ ಸದರಿ ಆಸ್ತಿಗಳು ನಮ್ಮ ಕುಟುಂಬಕ್ಕೆ ಸೇರಿದ್ದವು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ವಾದಿಯರ ಮತ್ತು ನಮ್ಮ ಹಿರಿಯರ ಹೈಯಾತಿಯಲ್ಲಿ ನಮ್ಮ ಮನೆತನದ ಎಲ್ಲಾ ಆಸ್ತಿಗಳು ಪಾಲು ಆಗಿದ್ದು ಆ ಪ್ರಕಾರ ಪ್ರತ್ಯೆಕವಾಗಿ ನಮ್ಮ ಪಾಲಿನ ಆಸ್ತಿಗಳನ್ನು ಸಾಗು ಮಾಡುತ್ತಾ ಸ್ವತಂತ್ರವಾಗಿ ಮಾರಾಟ ಸಹ ಮಾಡಿದ್ದೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾವು ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಸ್ವತಂತ್ರವಾಗಿ ವಹಿವಾಟ ಮಾಡುತ್ತಾ ಸ್ವತಂತ್ರವಾಗಿ ಪಂಪ ಸೆಟ್ ಹಾಕಿಕೊಂಡು ಪೈಪ್ ಲೈನ ಮುಖಾಂತರ ನದಿಯ ನೀರನ್ನು ಬಳಿಸಿ ಪ್ರತ್ಯೆಕವಾಗಿ ಕಬ್ಬು ಬೆಳೆದು ಕಾರ್ಖಾನೆ ಕಳುಹಿಸುತ್ತಿದ್ದೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಅದೇ ರೀತಿ ವಾದಿ ಬೆರೆಯುವರಿಂದ ¼ ಹಿಸ್ಸೆದ ಬೆಳೆ

ಕೊಡುತ್ತೇನೆ ಅಂತಾ ಹೇಳಿ ನೀರು ಪಡೆದು ಕಬ್ಬುನ್ನು ಬೆಳೆದು ಪ್ರತ್ಯೆಕವಾಗಿ ಕಾರ್ಖಾನೆಗೆ ಕಳುಹಿಸುತ್ತಿದ್ದಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ವಾದಿ ಯಾರ ಕಡೆಯಿಂದ ಬೆಳೆ ಕೊಡುತ್ತೇನೆ ಅಂತಾ ನೀರು ಪಡೆಯುತ್ತಿದ್ದ ಅನ್ನುವ ಬಗ್ಗೆ ಅವರ ಹೆಸರು ಬರೆಸಲು ನನಗೆ ತೊಂದರೆ ಇರಲಿಲ್ಲಾ ಅಂದರೆ ಸರಿ . ವಾದಿ ಮತ್ತು ನಮ್ಮ ಘರಾಣೇದವರ ಕ್ಷೇತ್ರದ ಆಸ್ತಿಗಳಿಗೆ ಅವರವರೇ ಹೆಸರುಗಳು ಪಹಣಿಗಳಲ್ಲಿ ದಾಖಲಿತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ವಾದಿಯ ತನ್ನ ತಂದೆ ನಂತರ ಮತ್ತು ನನ್ನ ತಂದೆ ನನ್ನ ಅಜ್ಜ ಮೃತಪಟ್ಟ ನಂತರ ದಾವಾ ಆಸ್ತಿಗಳನ್ನು ಎಂದು ಕೂಡಿ ವಹಿವಾಟ ಉಪಬೋಗ ಮಾಡಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಓ ಎಸ್ ನಂಃ 256/2010 ನೇದ್ದರಲ್ಲಿ ಕೆಲವೊಂದು ಆಸ್ತಿಗಳನ್ನು ಮತ್ತು ಪಾರ್ಟಿದಾರರನ್ನು ಸೇರಿಸದೇ ಇದ್ದುದ್ದರಿಂದ ಮತ್ತು ವಜಾ ಆಗುತ್ತದೆ ಅನ್ನುವ ಸಂಶಯದಿಂದ ಸದರಿ ದಾವೆ ಹಿಂದಕ್ಕೆ ಪಡೆದು ಈ ಖೊಟ್ಟಿ ದಾವೆ ಹಾಕಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದುಡಲಾಗಿದೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ